ಶ್ರೀ ಸಿದ್ದರಾಮಯ್ಯ : ನಾಳೆ ಪ್ರಶ್ನೋತ್ತರ ಅವಧಿಯಾದ ತಕ್ಷಣ ಇದನ್ನು ತೆಗೆದುಕೊಳ್ಳೋಣ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) : ಮತ್ತೆ ಮೇಲೆ ಹೋಗಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ : ನಾನು ನಾಳೆ ಬಜೆಟ್ discuss ನಲ್ಲಿ initiate ಮಾಡುತ್ತೇನೆ. ಪ್ರಶ್ನೋತ್ತರ ಅವಧಿ ಮುಗಿದ ತಕ್ಷಣ ಇದನ್ನೇ ತೆಗೆದುಕೊಳ್ಳಿ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) : ದಯವಿಟ್ಟು ಒಂದು ನಿಮಿಷ ಕುಳಿತುಕೊಳ್ಳಿ. ಇವತ್ತು ಇದನ್ನು ಪಾಸ್ ಮಾಡಿ ಮೇಲ್ಮನೆಗೆ ಕಳುಹಿಸಿಕೊಟ್ಟರೆ ನಾಳೆ ಅಲ್ಲಿಂದ ಬರುತ್ತದೆ. ನಾಡಿದ್ದು release ಮಾಡಿ ಕೊಂಡು, ರಾಜ್ಯದ ಎಲ್ಲಾ ಜನರಿಗೆ ಎಷ್ಟೆಲ್ಲಾ ಕೊಡುವುದಕ್ಕೆ ಸಾಧ್ಯವೋ ಅಷ್ಟೆಲ್ಲಾ ಕೊಡಿಸೋಣ. ಇದರಿಂದಾಗಿ ರಾಜ್ಯಕ್ಕೆ ಒಳ್ಳೆಯದಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಮುಖ್ಯಮಂತ್ರಿಗಳೆ, reasonable ಆಗಿ ಮಾತನಾಡಿ. Supplementary Estimate copy ನೇ ನಮಗೆ ಇನ್ನೂ ಸಿಕ್ಕಿಲ್ಲ. ಅವರು ಅದನ್ನು ಮಂಡಿಸಿ ಇಷ್ಟು ಕೋಟಿ ರೂ.ಗಳಿಗೆ Supplementary Estimate ಅನ್ನು ಮಂಡಿಸಿದ್ದೇವೆ ಒಪ್ಪಿಗೆ ಕೊಡಿಯೆಂದು ಹೇಳುತ್ತಾರೆ. ಆಗ ನಾನು ಏನು ಹೇಳಬೇಕೆಂದು ಹೇಳಿ?

8. ವಿತ್ತೀಯ ಕಾರ್ಯಕಲಾಪ :

ವಿಷಯ: 2011–12ನೇ ಸಾಲಿನ ಪೂರಕ ಅಂದಾಜು (ಮೂರನೇ ಹಾಗೂ ಅಂತಿಮ)ಗಳ ಮಂಡನೆ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) : ಆಯಿತು. ಮಾನ್ಯ ಸಭಾಧ್ಯಕ್ಷರೆ 2011–12ನೇ ಸಾಲಿನ ಪೂರಕ ಅಂದಾಜನ್ನು (ಮೂರನೇ ಹಾಗೂ ಅಂತಿಮ ಕಂತು) ಸದನದ ಮುಂದೆ ಮಂಡಿಸುತ್ತಿದ್ದೇನೆ.

(ಮಂಡಿಸಲಾಯಿತು)

ಸಭಾಧ್ಯಕ್ಷರು : ಮಂಡಿಸಲಾಯಿತು. ಚರ್ಚೆಯನ್ನು ಪ್ರಾರಂಭ ಮಾಡಿ. ಕಾವೇರಿ dispute ಹಾಗೂ ಪಿ.ಯು. ಬೋರ್ಡ್ ಬಗ್ಗೆ statement ಕೊಡುತ್ತೇವೆ ಎಂದರು. ಎಲ್ಲಿ ಇಬ್ಬರೂ ಮಂತ್ರಿಗಳು ಕಾಣುತ್ತಿಲ್ಲ?